51	ಮಂಚನಬೆಲೆ
52	ತಾರಕ
53	ಉಡುತೊರೆಹಳ್ಳ
54	ವಾಟೆಹೊಳೆ
55	ನಂಜಾಪುರ ಏತ
56	ಮಳಲೂರು ಏ.ನೀ.
57	ಚಿಕ್ಲಿಹೊಳೆ
58	ಬನಹಳ್ಳಿ ಏತ ನೀರಾವರಿ
59	ಕಾಚೇನಹಳ್ಳಿ
60	ಆಂಜನೇಯಪುರ
ಗೋದಾವರಿ ಕೊಳ್ಳದ ಯೋಜನೆಗಳು	
61	ಕಾರಂಜ
ಇತರೆ ಕೊಳ್ಳದ ಯೋಜನೆಗಳು:	
62	ವಾರಾಹಿ
63	ಕಳಸನಾಲಾ
64	ಬಂಡೂರಿನಾಲಾ

947 ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ (ಹಾವೇರಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವನೂರು ಹತ್ತಿರ ತುಂಗಭದ್ರಾ ನದಿಗೆ ಬ್ಯಾರೇಜ್ ನಿರ್ಮಾಣ ಮಾಡುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾವನೂರು ರೈತರಿಗೆ ನೀರು ಕೊಡುವ ಹಾಗೂ ಕುಡಿಯಲು ನೀರು ಬಳಕೆ ಮಾಡುವ ಸ್ಥಾವರಗಳಿಗೆ ಬೇಸಿಗೆಯಲ್ಲಿ ನೀರಿನ ತೊಂದರೆ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬ್ಯಾರೇಜ್ ನಿರ್ಮಾಣ ಮಾಡುವುದರಿಂದ ಸಾರ್ವಜನಿಕರಿಗೆ ಹಾಗೂ ರೈತರಿಗೆ ಅನುಕೂಲ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಸದರಿ ಪ್ರಸ್ತಾವನೆಯ ಬಗ್ಗೆ ರೂ. 29.83 ಕೋಟಿಗಳ ಮೊತ್ತಕ್ಕೆ ರೇಖಾ ಅಂದಾಜನ್ನು ಸಿದ್ಧಪಡಿಸಲಾಗಿದ್ದು, ಯೋಜನೆಯು ಮೂಲತಃ ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ ನಗರಾಭಿವೃದ್ಧಿ ಇಲಾಖೆ / ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿದೆ.

949 ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಹಾವೇರಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕು ತಿಮ್ಮಾಪುರ ಏತ ನೀರಾವರಿ ಕಾಮಗಾರಿ ಯಾವಾಗ ಪ್ರಾರಂಭ ಮಾಡಲಾಗುವುದು;

ಆ) ಹಾಗಿದ್ದಲ್ಲಿ, ಪ್ರಾರಂಭಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಇ) ಹಿಂದುಳಿದ ಕ್ಷೇತ್ರಗಳ ಇಂತಹ ಕಾಮಗಾರಿಗಳನ್ನು ನಿಲ್ಲಿಸಿದಲ್ಲಿ ಜನತೆಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಮತ್ತು ಆ) ಕೃಷ್ಣ ಜಲ ವಿವಾದ ನ್ಯಾಯಾಧೀಕರಣ–2 ಅಂತಿಮ ತೀರ್ಪನ್ನು ನೀಡಿದ ನಂತರ ರಾಜ್ಯಕ್ಕೆ ಲಭ್ಯವಾಗಬಹುದಾದ ನೀರಿನ ಪ್ರಮಾಣವನ್ನು ಆಧರಿಸಿ ಪರಿಗಣಿಸಲಾಗುವುದು.

ಇ) ನ್ಯಾಯಾಧೀಕರಣದ ತೀರ್ಪು ಬಂದಕೂಡಲೇ ಸದರಿ ಯೋಜನೆ ಬಗ್ಗೆ ಪರಿಶೀಲಿಸಲಾಗುವುದು.

90 ಶ್ರೀ ಪಾಟೀಲ್ ಎ.ಎನ್.(ನಡಹಳ್ಳಿ) (ದೇವರಹಿಪ್ಪರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ತಾಲ್ಲೂಕು ರಚನೆಗೆ ರಚಿಸಲಾದ ಸಮಿತಿಯು ಶಿಫಾರಸ್ಸು ಮಾಡಿದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೆ;